ಕಾಮಗಾರಿಯನ್ನು ರೈಲ್ವೇ ಇಲಾಖೆಯಿಂದ ನಿರ್ವಹಿಸಬೇಕಾಗಿರುತ್ತದೆ.

ಆ. ವಿತರಣಾ ನಾಲೆಯ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು, ಸುಮಾರು 730 ಹೆ.ಪ್ರದೇಶಕ್ಕೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ. ಸ:3300 ಮೀ.ನಲ್ಲಿ ಇರುವ ಕವಲು ಕಾಲುವೆಯ 1.5 ಕಿ.ಮೀ.ಗಳ ಕಾಲುವೆಯಲ್ಲಿನ ಸ:300 ಮೀ.ನಲ್ಲಿ ಅಮೃಸಂದ್ರ ಬಾಣಸಂದ್ರ ನಡುವಿನ ರೈಲ್ವೇ ಹಳಿ ಅಡ್ಡ ಬಂದಿದ್ದು, ಇಲ್ಲಿ ಆರ್.ಸಿ.ಸಿ. ಬಾಕ್ಸ್ ಸೈಫನ್ ನಿರ್ಮಾಣ ಮಾಡಬೇಕಾಗಿರುತ್ತದೆ. ಈ ಕಾಮಗಾರಿ ಪೂರ್ಣಗೊಂಡ ನಂತರ ಉಳಿಕೆ 153 ಹೆ. ಪ್ರದೇಶಕ್ಕೆ ನೀರು ಹರಿಸಲು ಕ್ರಮ ಕೈಗೊಳ್ಳಲಾಗುವುದು. ರೈಲ್ವೇ ಬಾಕ್ಸ್ ಸೈಫನ್ ಕಾಮಗಾರಿಗೆ ರೂ.1858 ಲಕ್ಷಗಳ ಅಂದಾಜನ್ನು ರೈಲ್ವೇ ಇಲಾಖೆಯು ತಯಾರಿಸಿದ್ದು, ಈ ಮೊತ್ತದಲ್ಲಿ ರೂ.10.00 ಲಕ್ಷಗಳನ್ನು ಜಲ ಸಂಪನ್ಮೂಲ ಇಲಾಖೆ ರೈಲ್ವೇ ಇಲಾಖೆಗೆ ಠೇವಣಿ ರೂಪದಲ್ಲಿ ಸಂದಾಯ ಮಾಡಿರುತ್ತದೆ. ಉಳಿದ ಮೊತ್ತವನ್ನು ಸಂದಾಯ ಮಾಡಿ ಕಾಮಗಾರಿಯನ್ನು ಕೂಡಲೇ ಕೈಗೊಳ್ಳುವಂತೆ ರೈಲ್ವೇ ಇಲಾಖೆಗೆ ತಿಳಿಸಲಾಗುವುದು.

ಇ. ಕಾಮಗಾರಿಯನ್ನು ಪೂರ್ಣಗೊಳಿಸಲು ರೈಲ್ವೇ ಇಲಾಖೆಗೆ ತಿಳಿಸಲಾಗುವುದು.

ತುರುವೇಕೆರೆ ನಗರದಿಂದ ತಿಪಟೂರಿಗೆ ವಿದ್ಯುತ್ ಉಗ್ರಾಣ ಬದಲಾಯಿಸಿರುವುದು.

1666(2287)

ಶ್ರೀ ಲಕ್ಷ್ಮೀನಾರಾಯಣ ಎಂ. ಡಿ.(ತುರುವೇಕೆರೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ನಗರದಿಂದ ತಿಪಟೂರಿಗೆ ವಿದ್ಯುತ್ ಉಗ್ರಾಣ ಬದಲಾಯಿಸಿದ ಕಾರಣವೇನು?

ಆ) ಇದರಿಂದ 2 ತಾಲ್ಲೂಕಿನ ಜನರಿಗೆ ತೊಂದರೆಯಾದ ಪ್ರಯುಕ್ತ ಕೆ.ಪಿ.ಟಿ.ಸಿ.ಎಲ್‌ನ ಉಗ್ರಾಣವನ್ನು ತುರುವೇಕೆರೆಗೆ ಕೊಡಲು ಕ್ರಮ ಜರುಗಿಸಲಾಗುವುದೆ?

ಶ್ರೀ ವೀರ ಕುಮಾರ್ ಆ. ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ನಿಗಮವು ಎಲ್ಲಾ ಸಾಧಕ ಬಾಧಕಗಳನ್ನು ಪರಿಶೀಲಿಸಿದ ನಂತರವೇ, ಎಲ್ಲಾ

ಕಾರ್ಯ ಮತ್ತು ಪಾಲನೆ ಉಪ ವಿಭಾಗಗಳ ಮಟ್ಟದಲ್ಲಿದ್ದ ಉಗ್ರಾಣಗಳನ್ನು ಆಯಾ ಸಂಬಂಧಪಟ್ಟ ವಿಭಾಗೀಯ ಉಗ್ರಾಣಗಳೊಂದಿಗೆ ವಿಲೀನಗೊಳಿಸಲು ನಿರ್ಧರಿಸಿ ಈ ಬಗ್ಗೆ ತನ್ನ ಆದೇಶವನ್ನು ನೀಡಿದೆ. ಅದರಂತೆಯೇ, ನಿಗಮದ ತುರುವೇಕೆರೆ ಉಪ ವಿಭಾಗದ ಉಗ್ರಾಣವನ್ನು ಈ ಉಪ ವಿಭಾಗಕ್ಕೆ ಸಂಬಂಧ ಪಟ್ಟ ತಿಪಟೂರು ವಿಭಾಗೀಯ ಉಗ್ರಾಣದೊಂದಿಗೆ ವಿಲೀನಗೊಳಿಸಲಾಗಿದೆ.

ಆ) ಈ ಮೇಲಿನ ಕ್ರಮದಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಚ್ಚರವಹಿಸಲಾಗಿದೆ. ಉಪ ವಿಭಾಗದ ಮಟ್ಟದಲ್ಲಿ ದೈನಂದಿನ ಕಾರ್ಯಗಳಿಗೆ ಅಡಚಣೆಯಾಗದಂತೆ ಅವಶ್ಯಕ ಸಾಮಗ್ರಿಗಳಾದ ಇನ್ಸುಲೇಟರ್‌ಗಳು, ಇನ್ಸುಲೇಶನ್ ಟೇಪುಗಳು, ಕಟ್‌ಔಟ್‌ಗಳು, ಲಗ್ಸ್‌ಗಳು, ವಿವಿಧ ಸಾಮರ್ಥ್ಯದ ಮಾಪಕಗಳು, ವಿವಿಧ ಸಾಮರ್ಥ್ಯದ ಟ್ರಾನ್ಸ್ ಫಾರ್ಮರ್‌ಗಳು ಮುಂತಾದ ಸಾಮಗ್ರಿಗಳನ್ನು ಉಪ ವಿಭಾಗ: ಶಾಖೆಗಳಲ್ಲಿ ಸ್ಟಾಕ್‌ನಲ್ಲಿ ಇಟ್ಟುಕೊಳ್ಳಲು ನಿಗಮವು ಆದೇಶ ನೀಡಿದೆ. ಆದ್ದರಿಂದ, 2 ತಾಲ್ಲೂಕಿನ ಜನರಿಗೆ ಯಾವುದೇ ರೀತಿಯ ತೊಂದರೆ ಉಂಟಾಗುವುದಿಲ್ಲ. ರಾಜ್ಯಾದ್ಯಂತ ಉಪ ವಿಭಾಗೀಯ ಮಟ್ಟದಲ್ಲಿದ್ದ ಉಗ್ರಾಣಗಳನ್ನು ಅವುಗಳ ಸಂಬಂಧಪಟ್ಟ ವಿಭಾಗೀಯ ಉಗ್ರಾಣಗಳೊಂದಿಗೆ ವಿಲೀನಗೊಳಿಸುವ ನಿರ್ಧಾರವನ್ನು ಸಮಗ್ರ ರೀತಿಯಲ್ಲಿ ಪರಿಶೀಲಿಸಿದ ನಂತರವೇ ತೆಗೆದುಕೊಂಡಿರುವುದರಿಂದ ಹಾಗೂ ಈ ನಿರ್ಧಾರವನ್ನು ರಾಜ್ಯಾದ್ಯಂತ ಒಂದೇ ರೀತಿಯಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಂಡಿರುವುದರಿಂದ, ತುರುವೇಕೆರೆಯಲ್ಲಿ ಪುನಃ ನಿಗಮದ ಉಗ್ರಾಣವನ್ನು ತೆರೆಯುವ ಉದ್ದೇಶ ಇರುವುದಿಲ್ಲ.

ತುರುವೇಕೆರೆ ತಾಲ್ಲೂಕಿನ ಅನೇಕ ಕಡೆ ಹಳ್ಳಿಗಳಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ವೋಲ್ಟೇಜ್ ಸಮಸ್ಯೆ.

1668(2290)

ಶ್ರೀ ಲಕ್ಷ್ಮೀನಾರಾಯಣ ಎಂ. ಡಿ.(ತುರುವೇಕೆರೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಯೋಜನೆಗಳಿಗೆ ವೋಲ್ಟೇಜ್ ಸಮಸ್ಯೆಯಾಗಿ ನೀರಿನ ಕೊರತೆಯಿಂದ ಜನರು ತತ್ತರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಸರ್ಕಾರದ ಆದೇಶದಂತೆ ವೋಲ್ಟೇಜ್ ಸಮಸ್ಯೆ ಇರುವ ಹಳ್ಳಿಗಳಿಗೆ ತಕ್ಷಣ